ಸಿ.ಸಿ .ನಂ. 126/2023 ಪಿಡಬ್ಲೂಃ 1

ದಿನಾಂಕಃ 30-12-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

12. ಪಂಚಾಯತ ದಾವೆಯಲ್ಲಾದ ಡಿಕ್ರಿಯ ಆಧಾರದ ಮೇರೆಗೆ ಆರೋಪಿಯ ವಿರುದ್ಧ ನಾವು ಅಮಲ ಜಾರಿ ಅರ್ಜಿಯನ್ನು ದಾಖಲಿಸಿರುವುದಿಲ್ಲ. ದಿಃ 02-12-2023 ರಂದು ನಾನು ಸಾಲದ ಖಾತೆಯ ಉತಾರವನ್ನು ನ್ಯಾಯಾಲಯಕ್ಕೆ ತಂದಿರುತ್ತೇನೆ. ಸದರಿ ಸಾಲದ ಖಾತೆಯ ಉತಾರದಲ್ಲಿ ಈ ಕೇಸಿನ ಸಾಲದ ಹಣ ಸಾಲಗಾರನ ಖಾತೆಗೆ ಜಮಾ ಆಗಿ, ನಂತರ ಅದು ಆರೋಪಿಯ ಖಾತೆಗೆ ಜಮಾ ಆಗಿರುವುದು ಕಂಡು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಲಗಾರನಿಗೆ ಸಾಲದ ಮೊತ್ತವನ್ನು ಚೆಕ್ ಮುಖಾಂತರ ನೀಡಿದ್ದು , ಸದರಿ ಚೆಕ್ ನ ನಂಬರ ನನಗೆ ಗೊತ್ತಿಲ್ಲ. ಈ ಕೇಸಿನ ಸಾಲದ ಹಣ ದಿಃ 27-05-2020 ರಂದು ಸಾಲಗಾರನ ಖಾತೆಗೆ ಜಮಾ ಆಗಿ, ನಂತರ ಅದು ಆರೋಪಿಯ ಖಾತೆಗೆ ಜಮಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ ಆರೋಪಿಯು ಸದರಿ ಹಣವನ್ನು ನಮ್ಮ ಸಂಸ್ಥೆಯ ಕೆಡಿಸಿಸಿ ಬ್ಯಾಂಕಿನಲ್ಲಿರುವ ಖಾತೆಗೆ ಚೆಕ್ ನಂ. 729872 ಇದರ ಮೂಲಕ ತುಂಬಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಹೇಳುತ್ತಾರೆ ನಮ್ಮ ಸಂಸ್ಥೆಯಲ್ಲಿ ದುರುಪಯೋಗ ಮಾಡಿರುವ ಹಣವನ್ನು ಆರೋಪಿಯು ತುಂಬಿರುತ್ತಾರೆ ಎಂದು . ಮೇಲೆ ಹೇಳಿದ ಹಣವನ್ನು ನಾವು ನಮ್ಮ ಬ್ಯಾಂಕ್ ಖಾತೆಗೆ ವರ್ಗಾಯಿಸಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ಆರೋಪಿಯೇ ಜಮಾ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ಅದೇ ರೀತಿ ನಾವು ಮಂಜುನಾಥ ಹನುಮಂತ ನಾಯ್ಕ ಎಂಬವರ ಖಾತೆಗೆ ಅವರ ಸಾಲದ ಹಣವನ್ನು ವರ್ಗಾಯಿಸಿ ಆ ಹಣವನ್ನು ದಿಃ 28-05-2020 ರಂದು ಆರೋಪಿಯ ಖಾತೆಗೆ ವರ್ಗಾಯಿಸಿ, ಅದೇ ದಿನ ಚೆಕ್ ನಂ. 729875 ರ ಮೂಲಕ ಕೆಡಿಸಿಸಿ ಬ್ಯಾಂಕಿನಲ್ಲಿರುವ ನಮ್ಮ ಖಾತೆಗೆ ವರ್ಗಾಯಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ .

ಪಿಡಬ್ಲೂಃ 1

13. ಆರೋಪಿಯು ಹಣ ದುರುಪಯೋಗ ಮಾಡಿರುವ ಬಗ್ಗೆ ತನಿಖೆ ಮಾಡಿಸಿರುತ್ತೇವೆ. ಆ ರೀತಿ ತನಿಖೆ ಮಾಡಿಸಿ , ಅದರ ತನಿಖಾ ವರದಿ 2023 ನೇ ಇಸವಿಯಲ್ಲಿ ಬಂದಿರುತ್ತದೆ. ಸದರಿ ವರದಿ 2023 ನೇ ಇಸವಿಯ ಯಾವ ತಿಂಗಳಿನಲ್ಲಿ ಬಂತು ಎಂದು ನನಗೆ ನೆನಪಿಲ್ಲ . ಸದರಿ ತನಿಖೆಯನ್ನು ನಿವೃತ್ತ ಲೆಕ್ಕ ಪರಿಶೋಧನಾ ಅಧಿಕಾರಿಯಾಗಿರುವ ಎನ್ ವಿ ನಾಯ್ಕರವರು ಮಾಡಿರುತ್ತಾರೆ . ಸದರಿ ತನಿಖಾ ವರದಿಯಲ್ಲಿ ಆರೋಪಿಯು ಎಷ್ಟು ಹಣವನ್ನು ದುರುಪಯೋಗ ಪಡಿಸಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ತನಿಖಾ ವರದಿಯನ್ನು ನಾನು ನೋಡಿರುತ್ತೇನೆ. ಸದರಿ ತನಿಖಾ ವರದಿ ನಮ್ಮ ಹತ್ತಿರ ಇದೆ . ಸದರಿ ತನಿಖಾ ವರದಿಯನ್ನು ಈ ಕೇಸಿನಲ್ಲಿ ಹಾಜರು ಪಡಿಸಲು ನಮ್ಮದೇನು ಅಭ್ಯಂತರವಿಲ್ಲ ಎಂದರೆ ಸರಿ . ದಿಃ 20-09-2023 ರಂದು ಸಹಕಾರಿ ಸಂಘಗಳ ಸಹಾಯಕ ನಿಭಂಧಕರು,ಕುಮಟಾ ಇವರು ಆರೋಪಿಯ ವಿರುದ್ಧ ಸಹಕಾರ ಸಂಘಗಳ ಕಾಯ್ದೆಯ ಕಲಂ 64(1)ರ ಅಡಿಯಲ್ಲಿ ವಿಚಾರಣೆಯನ್ನು ಜರುಗಿಸಬೇಕು ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ . ಸದರಿ ಆದೇಶವನ್ನು ನಾನು ನೋಡಿರುತ್ತೇನೆ. ಸದರಿ ವಿಚಾರಣೆ ಈಗಲೂ ನಡೆಯುತ್ತಿದೆ . ಮೇಲೆ ಹೇಳಿದ ಎನ್ ವಿ ನಾಯ್ಕರವರನ್ನು ನಮ್ಮ ಸಂಸ್ಥೆಯ ಆಡಳಿತ ಮಂಡಳಿಯವರು ನೇಮಿಸಿರುತ್ತಾರೆ .

14. ಆರೋಪಿಯು ತನ್ನ ಹೆಂಡತಿಯಾದ ನಾಗರತ್ನಾ ಮಂಜುನಾಥ ಪಟಗಾರ ರವರಿಗೆ ನಮ್ಮ ಸಂಸ್ಥೆಯ ಆಡಳಿತ ಮಂಡಳಿಯ ಅನುಮತಿಯನ್ನು ಪಡೆಯದೇ ಸಾಲವನ್ನು ನೀಡಿರುವ ಬಗ್ಗೆ ಹಾಗೂ ಅವರು ಭವಿಷ್ಯ ನಿಧಿ ಶಿರ್ಷಿಕೆಯ ಅಡಿಯಲ್ಲಿ 5 ಲಕ್ಷ ರೂಪಾಯಿ ಡ್ರಾ ಮಾಡಿರುವ ಬಗ್ಗೆ ಮೇಲೆ ಹೇಳಿದ ಕಲಂ 64(1)ರ ಅಡಿಯಲ್ಲಿ ವಿಚಾರಣೆ ನಡೆಯುತ್ತಿದೆ ಎಂದರೆ ಸರಿ . ಸಾಕ್ಷಿಗೆ ಮೇಲೆ ಹೇಳಿದ ದಿಃ 20-09-2023 ರಂದು ಸಹಕಾರಿ ಸಂಘಗಳ ಸಹಾಯಕ ನಿಭಂಧಕರು, ಕುಮಟಾ ಇವರು ಮಾಡಿರುವ ಆದೇಶದ ನೋಟರಿಕೃತ ಪ್ರತಿಯ ಜರೆಕ್ಸ ಪ್ರತಿಯನ್ನು ತೋರಿಸಲಾಗಿ ಅವರು ಅದನ್ನು ನೋಡಿ ಒಪ್ಪಿ ಗುರುತಿಸಿರುತ್ತಾರೆ . ಸದರಿ ದಾಖಲೆ ಜರೆಕ್ಸ ಪ್ರತಿಯಾಗಿರುವುದರಿಂದ ಅದನ್ನು ನಿಶಾನೆಯಾಗಿ

ಗುರುತಿಸಿರುವುದಿಲ್ಲ. ಮೇಲೆ ಹೇಳಿದ 8 ಲಕ್ಷ ರೂಪಾಯಿ ಹಾಗೂ 5 ಲಕ್ಷ ರೂಪಾಯಿ ಹಣವನ್ನು ದುರುಪಯೋಗ ಪಡಿಸಿರುತ್ತಾರೆ ಎಂದು ಹೇಳಿರುವುದನ್ನು ಬಿಟ್ಟು ಆರೋಪಿಯ ವಿರುದ್ಧ ಬೇರೆ ಯಾವುದೇ ಹಣವನ್ನು ದುರುಪಯೋಗ ಮಾಡಿರುತ್ತಾರೆ ಎಂದು ಯಾವುದೇ ವಿಚಾರಣೆ ನಡೆದಿಲ್ಲ ಹಾಗೂ ನಡೆಯುತ್ತಿಲ್ಲ ಎಂದರೆ ಸರಿ . ಮೇಲೆ ಹೇಳಿದ ದಿಃ 20-09-2023ರ ಆದೇಶದ ಪ್ರಕಾರ "ಸಂಘದಲ್ಲಿ ಸ್ಥಿರಾಸ್ತಿ ಆಧಾರದ ಸಾಲವೆಂದು ಶ್ರೀದೇವಿ ಗಣಪತಿ ಪಟಗಾರ, ಇವರಿಗೆ ರೂ. 19,40,000/-, ಶ್ರೀ ರಾಮರಾಯ ಹನುಮಂತ ನಾಯ್ಕ , ಇವರಿಗೆ ರೂ. 19,50,000/- ಮತ್ತು ಶ್ರೀ ಮಂಜುನಾಥ ಹನುಮಂತ ನಾಯ್ಕ ಇವರಿಗೆ ರೂ, 19,50,000/- ಗಳನ್ನು ದಿಃ 14-03-2020ರ ಆಡಳಿತ ಮಂಡಳಿಯಲ್ಲಿ ಮಂಜೂರು ಮಾಡಿದ್ದು , ಸದರಿ ಸಾಲದ ಖಾತೆಗಳು ಸುಸ್ತಿಯಾಗಿರುವುದರಿಂದ, ಸದರಿ ಸಾಲಗಗಳನ್ನು ಸೂಕ್ತ ದಾಖಲಾತಿಗಳನ್ನು ಪಡೆದು ಮಂಜೂರು ಮಾಡಲಾಗಿದೆಯೇ , ಸದರಿ ಸಾಲ ಖಾತೆಗಳ ಹಣವು ಮಂಜೂರಿಯಾದ ನಂತರ ಸಾಲಗಾರರ ಖಾತೆಯಿಂದ ಸಂಘದ ಕಾರ್ಯದರ್ಶಿಯಾದ ಶ್ರೀ ಮಂಜುನಾಥ ಜಟ್ಟಿಪಟಗಾರ, ಇವರ ಖಾತೆಗೆ ಜಮೆ ಆಗಿದೆಯೇ '' , ಇದು ವಿಚಾರಣಾಂಶ 1 ಎಂದು ಸರಿ.

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.